# ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರಾಗಿಂಗ್ ಹಾವಳಿಯನ್ನು ತಡೆಗಟ್ಟುವದರ ಕುರಿತು ಯುಜಿಸಿ ನಿಬಂಧನೆಗಳ ಸಾರಾಂಶ, 2009

1. **ಮುನ್ನುಡಿ:** 8.05.2009 ರಂದು ಗೌರವಾನ್ವಿತ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳ ಮೂಲಕ ಮತ್ತು ರಾಗಿಂಗ್ ಅನ್ನು ನಿಷೇಧಿಸುವ, ತಡೆಗಟ್ಟುವ ಮತ್ತು ತೊಲಗಿಸುವ ಕೇಂದ್ರ ಸರ್ಕಾರ ಮತ್ತು ವಿಶ್ವವಿದ್ಯಾಲಯ ಸಹಾಯ ಆಯೋಗಗಳ ದೃಢ ನಿರ್ಣಯದ ಪರಿಗಣನೆಯಲ್ಲಿ.

2. **ಧ್ಯೇಯ:** ಈ ನಿಬಂಧನೆಗಳಡಿಯಲ್ಲಿ ರಾಗಿಂಗ್ ಅನ್ನು ನಿಷೇಧಿಸಿ, ಅದು ಮತ್ತೆ ತಲೆದೋರದಂತೆ ತಡೆದು, ಈ ನಿಬಂಧನೆಗಳಲ್ಲಿ ನೀಡಿದಂತೆ ಮತ್ತು ಸೂಕ್ತ ಕಾನೂನಿನ ಪ್ರಕಾರ ರಾಗಿಂಗ್ ನಲ್ಲಿ ತೊಡಗಿದವರನ್ನು ಶಿಕ್ಷಿಸುವ ಮೂಲಕ ದೇಶದಲ್ಲಿನ ವಿಶ್ವವಿದ್ಯಾನಿಲಯಗಳು, ಸ್ವಾಯತ್ತ ವಿಶ್ವವಿದ್ಯಾನಿಲಯಗಳು ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳಿಂದ ರಾಗಿಂಗ್ ಅನ್ನು ಅದರ ಎಲ್ಲಾ ರೂಪಗಳಿಂದ ತೊಲಗಿಸುವುದು.

3. **ಯಾವುದೆಲ್ಲಾ ರಾಗಿಂಗ್ ಎಂದು ಕರೆಸಿಕೊಳ್ಳುತ್ತದೆ:** ರಾಗಿಂಗ್ ಕೆಳಗಿನ ಯಾವುದಾದರೂ ಒಂದು ಅಥವಾ ಅಧಿಕ ಕೃತ್ಯಗಳನ್ನು ಒಳಗೊಂಡಿರುತ್ತದೆ:
   a) ಯಾವುದೇ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳಿಂದ, ಶಬ್ಧಗಳಿಂದ ಆಗಲಿ ಅಥವಾ ಬರಹದಿಂದಾಗಲಿ ಅಥವಾ ಕೃತ್ಯದಿಂದಾಗಲಿ, ಒಬ್ಬ ಹೊಸ ವಿದ್ಯಾರ್ಥಿಯನ್ನು ಅಥವಾ ಇತರೆ ಯಾವುದೇ ವಿದ್ಯಾರ್ಥಿಯನ್ನು ಒರಟಾಗಿ ನಡೆಸಿಕೊಳ್ಳುವ ಅಥವಾ ಹೀಯಾಳಿಸುವ ಯಾವುದೇ ವರ್ತನೆ.
   b) ಒಬ್ಬ ಹೊಸ ವಿದ್ಯಾರ್ಥಿ ಅಥವಾ ಇತರೆ ಯಾವುದೇ ವಿದ್ಯಾರ್ಥಿಗೆ ಕಿರ್ಕಿರಿ, ಸಂಕಷ್ಟ, ದೈಹಿಕ ಅಥವಾ ಮಾನಸಿಕ ತೊಂದರೆ ಉಂಟಾಗುವಂತೆ, ಯಾವುದೇ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳು ಗಲಾಟೆಯಲ್ಲಿ ಅಥವಾ ಅಶಿಸ್ತಿನ ಚಟುವಟಿಕೆಗಳಲ್ಲಿ ತೊಡಗುವುದು.
   c) ಯಾವುದೇ ವಿದ್ಯಾರ್ಥಿಯನ್ನು ತಾನು ಸಾಮಾನ್ಯವಾಗಿ ಮಾಡದಿರುವ ಒಂದು ಕೃತ್ಯವನ್ನು ಮಾಡುವಂತೆ ಕೇಳುವುದು ಮತ್ತು ಇಂತಹ ಒಬ್ಬ ಹೊಸ ವಿದ್ಯಾರ್ಥಿ ಅಥವಾ ಇತರೆ ಯಾವುದೇ ವಿದ್ಯಾರ್ಥಿಗೆ ದೈಹಿಕ ಅಥವಾ ಮಾನಸಿಕ ವೇದನೆಯನ್ನು ಉಂಟುಮಾಡಿ ಅವರಲ್ಲಿ ನಾಚಿಕೆ ಅಥವಾ ಕಿರ್ಕಿರಿ ಮೂಡುವಂತೆ ಮಾಡುವುದು.
   d) ಯಾವುದೇ ಒಬ್ಬ ಹೊಸ ವಿದ್ಯಾರ್ಥಿ ಅಥವಾ ಇತರೆ ಯಾವುದೇ ವಿದ್ಯಾರ್ಥಿಯ ನಿಯಮಿತ ಶೈಕ್ಷಣಿಕ ಚಟುವಟಿಕೆಗೆ ಅಡ್ಡಿಯಾಗುವ ಅಥವಾ ತೊಂದರೆ ನೀಡುವ ಓರ್ವ ಹಿರಿಯ ವಿದ್ಯಾರ್ಥಿಯ ಯಾವುದೇ ವರ್ತನೆ.

e) ಓರ್ವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳ ಗುಂಪಿಗೆ ನಿಯೋಜಿಸಲಾದ ಶೈಕ್ಷಣಿಕ ಕಾರ್ಯಗಳಿಗೆ ಒಬ್ಬ ಹೊಸ ವಿದ್ಯಾರ್ಥಿ ಅಥವಾ ಇತರೆ ಯಾವುದೇ ವಿದ್ಯಾರ್ಥಿಯ ಸೇವೆಗಳನ್ನು ದುರುಪಯೋಗಪಡಿಸಿಕೊಳ್ಳುವುದು.

f) ವಿದ್ಯಾರ್ಥಿಗಳಿಂದ ಒಬ್ಬ ಹೊಸ ವಿದ್ಯಾರ್ಥಿ ಅಥವಾ ಇತರೆ ಯಾವುದೇ ವಿದ್ಯಾರ್ಥಿಯ ಮೇಲೆ ಬಲವಂತದಿಂದ ಹಣಕಾಸಿನ ವೆಚ್ಚ ಮಾಡುವಂತೆ ಅಥವಾ ಹಣಕಾಸಿನ ಸುಲಿಗೆಯ ಯಾವುದೇ ವರ್ತನೆ.

g) ಇವುಗಳನ್ನು ಒಳಗೊಂಡಂತೆ ಯಾವುದೇ ರೀತಿಯ ದೈಹಿಕ ಹಿಂಸೆ: ಲೈಂಗಿಕ ಕಿರುಕುಳ, ಸಲಿಂಗಕಾಮಿ ಹಲ್ಲೆಗಳು, ನಗ್ನಗೊಳಿಸುವಿಕೆ, ಅಶ್ಲೀಲ ಕೃತ್ಯಗಳನ್ನು ಮಾಡುವಂತೆ ಬಲವಂತ ಮಾಡುವುದು, ಸನ್ನೆಗಳನ್ನು ಮಾಡುವುದು, ದೈಹಿಕ ಗಾಯ ಉಂಟುಮಾಡುವುದು ಅಥವಾ ಆರೋಗ್ಯ ಅಥವಾ ವ್ಯಕ್ತಿಗೆ ಇತರ ಯಾವುದೇ ರೀತಿಯ ಅಪಾಯ;

h) ಹೊಸ ವಿದ್ಯಾರ್ಥಿಗೆ ಅಥವಾ ಇತರ ಯಾವುದೇ ವಿದ್ಯಾರ್ಥಿಗೆ ಸಕ್ರಿಯವಾಗಿ ಅಥವಾ ಪರೋಕ್ಷವಾಗಿ ಕಸಿವಿಸಿ ಉಂಟು ಮಾಡಿ ವಿಕೃತ ಆನಂದ ಅಥವಾ ಹಿಂಸಾನಂದ ಪಡೆಯುವುದನ್ನು ಒಳಗೊಂಡಂತೆ ಮಾತುಗಳು, ಇಮೇಲ್, ಅಂಚೆ, ಸಾರ್ವಜನಿಕ ಅಪಮಾನಗಳ ಯಾವುದೇ ವರ್ತನೆ.

i) ಹಿಂಸಾನಂದದ ಸಂತೋಷವನ್ನು ಪಡೆಯುವ ಅಥವಾ ಪಡೆಯದಿರುವ ಉದ್ದೇಶದೊಂದಿಗೆ ಓರ್ವ ಹೊಸ ವಿದ್ಯಾರ್ಥಿಯ ಅಥವಾ ಇತರ ಯಾವುದೇ ವಿದ್ಯಾರ್ಥಿಯ ಮಾನಸಿಕ ಆರೋಗ್ಯ ಮತ್ತು ಆತ್ಮ ವಿಶ್ವಾಸದ ಮೇಲೆ ಪರಿಣಾಮ ಬೀರುವ ಅಥವಾ ಹೊಸ ವಿದ್ಯಾರ್ಥಿಯ ಮೇಲೆ ಓರ್ವ ವಿದ್ಯಾರ್ಥಿಯು ತನ್ನ ಶಕ್ತಿ, ಅಧಿಕಾರ ಅಥವಾ ಶ್ರೇಷ್ಠತೆಯನ್ನು ತೋರುವ ಯಾವುದೇ ಕೃತ್ಯ.

4. **ರಾಗಿಂಗ್ ನಿಷೇಧಕ್ಕೆ ಕ್ರಮಗಳು:** ಸಾಂಸ್ಥಿಕ ಮತ್ತ, ವಿಶ್ವವಿದ್ಯಾನಿಲಯ ಮಟ್ಟ, ಜಿಲ್ಲಾ ಮಟ್ಟ ಮುಂತಾದ ಅನೇಕ ಕ್ರಮಗಳಿವೆ. ವಿದ್ಯಾರ್ಥಿಗಳು ತಿಳಿದಿರಬೇಕಾದ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ನೀಡಲಾಗಿದೆ:

- ಯಾವುದೇ ಸಂಸ್ಥೆಯು, ವರದಿಯಾದ ಯಾವುದೇ ರೂಪದ ರಾಗಿಂಗ್ ಅನ್ನು ಅನುಮತಿಸಬಾರದು ಅಥವಾ ನಿರ್ಲಕ್ಷಿಸಬಾರದು; ಮತ್ತು ಸಂಸ್ಥೆಯ ಹೊರಗೆ ಅಥವಾ ಒಳಗೆ ರಾಗಿಂಗ್ ಅನ್ನು ತೊಲಗಿಸುವ ಗುರಿಯನ್ನು ಸಾಧಿಸಲು ಈ ನಿಬಂಧನೆಗಳಿಗೆ ಒಳಪಟ್ಟಂತೆ ಆದರೆ ಇವಕ್ಕೆ ಮಾತ್ರವೇ ಸೀಮಿತವಾಗಿರದೆ, ಎಲ್ಲಾ ಸಂಸ್ಥೆಗಳು ಎಲ್ಲಾ ಅಗತ್ಯ ಮತ್ತು ಆವಶ್ಯಕ ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಸಕ್ರಿಯವಾಗಿ ಅಥವಾ ಪರೋಕ್ಷವಾಗಿ ರಾಗಿಂಗ್ ಮಾಡಿದವರು ಮತ್ತು / ಅಥವಾ ರಾಗಿಂಗ್ ಅನ್ನು ನಿರ್ಲಕ್ಷಿಸಿದವರು, ಅಥವಾ ರಾಗಿಂಗ್ ಅನ್ನು ಪ್ರೋತ್ಸಾಹಿಸಿದ ಗುಂಪಿನ ಒಂದು ಭಾಗವಾದವರ ವಿರುದ್ಧ ಎಲ್ಲಾ ಸಂಸ್ಥೆಗಳು ಈ ನಿಬಂಧನೆಗಳ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಬೇಕು.
- ವಿದ್ಯುನ್ಮಾನ, ಶ್ರವಣ ದೃಶ್ಯ ಅಥವಾ ಮುದ್ರಣ ಅಥವಾ ಇತರ ಯಾವುದೇ ಮಾಧ್ಯಮಗಳಲ್ಲಿ ಯಾವುದೇ ಅಧ್ಯಯನಕ್ಕೆ ವಿದ್ಯಾರ್ಥಿಗಳ ದಾಖಲಾತಿಗಾಗಿ ಯಾವುದೇ ಸಂಸ್ಥೆಯು ನೀಡುವ ಸಾರ್ವಜನಿಕ

ಘೋಷಣೆಯಲ್ಲಿ, ಸಂಸ್ಥೆಯಲ್ಲಿ ರಾಗಿಂಗ್ ನಿಷೇಧಿಸಲಾಗಿದೆ ಎಂದು, ಮತ್ತು ಸಕ್ರಿಯವಾಗಿ ಅಥವಾ ಪರೋಕ್ಷವಾಗಿ ರಾಗಿಂಗ್ ಮಾಡುವವರು, ರಾಗಿಂಗ್ ಅನ್ನು ನಿರ್ಲಕ್ಷಿಸಿದವರು, ಆಟಹ್ವಾ ರಾಗಿಂಗ್ ಅನ್ನು ಗುಪ್ತವಾಗಿ ಪ್ರೋತ್ಸಾಹಿಸುವವರನ್ನು ಈ ನಿಬಂಧನೆಗಳ ಪ್ರಕಾರ ಮತ್ತು ಆ ಸಮಯಕ್ಕೆ ಅಸ್ತಿತ್ವದಲ್ಲಿರುವ ಕಾನೂನಿನ ಪ್ರಕಾರ ಶಿಕ್ಷೆಗರ್ಹರಾಗುತ್ತಾರೆ ಎಂಬುದನ್ನು ತಿಳಿಸಬೇಕಿರುತ್ತದೆ.

- ಸಂಸ್ಥೆಯ ಮುಖ್ಯಸ್ಥರು, ಅಧ್ಯಾಪಕ ವರ್ಗದವರು, ರಾಗಿಂಗ್ ವಿರೋಧಿ ಸಮಿತಿ ಮತ್ತು ರಾಗಿಂಗ್ ವಿರೋಧಿ ದಳದ ಸದಸ್ಯರು, ಜಿಲ್ಲೆ ಮತ್ತು ಉಪ-ವಿಭಾಗೀಯ ಅಧಿಕಾರಿಗಳು, ಹಾಸ್ಟೆಲ್ ವಾರ್ಡನ್ ಗಳು ಮತ್ತು ಇತರ ಅಧಿಕಾರಿಗಳು ಮುಂತಾದ ಸಂಸ್ಥೆಯ ಪ್ರಮುಖ ಕಾರ್ಯಕರ್ತರು ಮತ್ತು ರಾಗಿಂಗ್ ವಿರೋಧಿ ಸಹಾಯವಾಣಿಯ ದೂರವಾಣಿ ಸಂಖ್ಯೆಗಳನ್ನು ದಾಖಲಾತಿಯ ಮಾಹಿತಿ ಕೈಪಿಡಿ ಅಥವಾ ಪ್ರಾಸ್ಪೆಕ್ಟಸ್ ನಲ್ಲಿ ಪ್ರಕಟಿಸಲಾಗುವುದು.
- ದಾಖಲಾತಿಗಾಗಿನ ಅರ್ಜಿ, ದಾಖಲಾತಿ ಅಥವಾ ನೋಂದಣಿಗಳ ಜೊತೆಗೆ ನಿರ್ದಿಷ್ಟ ನಮೂನೆಯಲ್ಲಿ ಒಬ್ಬ ವಿದ್ಯಾರ್ಥಿಯಿಂದ ಸಹಿ ಮಾಡಲಾದ ಒಂದು ರಾಗಿಂಗ್ ವಿರೋಧಿ ಅಫಿಡೆವಿಟ್ ಇರಬೇಕು ಮತ್ತು ಪೋಷಕರಿಂದ ಸಹಿಹಾಕಲಾದ ಮತ್ತೊಂದು ರಾಗಿಂಗ್ ವಿರೋಧಿ ಅಫಿಡೆವಿಟ್ ಲಗತ್ತಿಸಿರಬೇಕು. (ಈ ಎರಡೂ ಅಫಿಡೆವಿಟ್ ಗಳನ್ನು ಅಂತರ್ಜಾಲದಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು)
- ರಾಗಿಂಗ್ ವಿರೋಧಿ ಸಹಾಯವಾನಿಯಲ್ಲಿ ಪಡೆದ ಯಾವುದೇ ಯಾತನೆಯ ಸಂದೇಶವನ್ನು ತಕ್ಷಣವೇ ಸಂಸ್ಥೆಯ ಮುಖ್ಯಸ್ಥರು, ಹಾಸ್ಟೆಲ್ ಗಳ ವಾರ್ಡನ್, ಸಂಬಂಧಿತ ವಿಶ್ವವಿದ್ಯಾನಿಲಯದ ವಲಯಾಧಿಕಾರಿಗಳಿಗೆ ತಿಳಿಸಬೇಕು, ಒಂದು ವೇಳೆ ಘಟನೆಯು ವಿಶ್ವವಿದ್ಯಾನಿಲಯಕ್ಕೆ ಸೇರಿದ ಒಂದು ಸಂಸ್ಥೆಯಲ್ಲಿ ನಡೆದಿದ್ದರೆ, ಸಂಬಂಧಿತ ಜಿಲ್ಲಾಧಿಕಾರಿಗಳು ಮತ್ತು ಅಗತ್ಯವಾದರೆ, ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೋಲಿಸ್ ಸೂಪರಿಂಟೆಂಡೆಂಟ್ ಮತ್ತು ಸಾರ್ವಜನಿಕರ ಗಮನಕ್ಕೆ ತರಲು ಅದನ್ನು ಅಂತರ್ಜಾಲದಲ್ಲಿ ಹಾಕಬೇಕು ಮತ್ತು ಜೊತೆಯಲ್ಲೇ ಮಾಧ್ಯಮಗಳಲ್ಲಿ ಕೂಡ ಪ್ರಕಟಿಸಬೇಕು.
- ರಾಗಿಂಗ್ ವಿರೋಧಿ ದಳದ ಶಿಫಾರಸ್ಸು ಅಥವಾ ರಾಗಿಂಗ್ ನ ಯಾವುದೇ ವರದಿ ಮಾಡಲಾದ ಘಟನೆಯ ಮಾಹಿತಿ ಪಡೆದ ನಂತರ, ಇಪ್ಪತ್ನಾಲ್ಕು ಗಂಟೆಗಳ ಒಳಗಾಗಿ, ಸಂಸ್ಥೆಯ ಮುಖ್ಯಸ್ಥರು ತಕ್ಷಣವೇ ಇದು ಕಾನೂನು ರೀತ್ಯ ಅಪರಾಧವೇ ಎಂದು ಆಲೋಚಿಸಿ, ತಾವೇ ಖುದ್ದಾಗಿ ಅಥವಾ ತಾವು ನಿರ್ದೇಶಿಸಿದ ರಾಗಿಂಗ್ ವಿರೋಧಿ ಸಮಿತಿಯ ಓರ್ವ ಸದಸ್ಯನ ಮೂಲಕ, ಪೋಲಿಸ್ ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ, ಸೂಕ್ತ ಕಾನೂನಿನ ಪ್ರಕಾರ, ಮೊದಲ ಮಾಹಿತಿ ವರದಿಯನ್ನು (ಎಫ್ಐಆರ್) ಅನ್ನು ಸಲ್ಲಿಸಬೇಕು.
- ಆಯೋಗವು, ವಿದ್ಯಾರ್ಥಿ ಮತ್ತು ಆತನ/ಆಕೆಯ ಪೋಷಕರಿಂದ ಸಮ್ಮತಿಸಲಾದ ಅಫಿಡೆವಿಟ್ ಗಳಿಂದ ಮಾಡಲಾದ ಒಂದು ಸೂಕ್ತ ಡಾಟಾಬೇಸ್ ಅನ್ನು ನಿರ್ವಹಿಸಬೇಕು, ಮತ್ತು ಸಂಸ್ಥೆಯು ಅದನ್ನು ವಿದ್ಯುನ್ಮಾನವಾಗಿ, ತನ್ನಲ್ಲೇ ಅಥವಾ ತಾನು ನೇಮಿಸಿದ ಒಂದು ಏಜೆನ್ಸಿಯ ಮೂಲಕ ಸಂಗ್ರಹಿಸಿಡಬೇಕು; ಮತ್ತು ಇಂತಹ ಡಾಟಾಬೇಸ್ ಸ್ವೀಕೃತ ರಾಗಿಂಗ್ ದೂರುಗಳು ಮತ್ತು ಕೈಗೊಂಡ ಕ್ರಮಗಳ ಒಂದು ದಾಖಲೆಯಾಗಿ ಕೂಡ ಕಾರ್ಯ ನಿರ್ವಹಿಸುವುದು.

- ಆಯೋಗದ ಯಾವುದೇ ಸಾಮಾನ್ಯ ಅಥವಾ ವಿಶೇಷ ಯೋಜನೆಗಳಡಿಯಲ್ಲಿ ಯಾವುದೇ ಸಂಸ್ಥೆಗೆ ನೀಡಲಾದ ಆರ್ಥಿಕ ಸಹಾಯಕ್ಕೆ ನೀಡುವ ಬಳಕೆಯ ಪ್ರಮಾಣಪತ್ರದಲ್ಲಿ, ಆ ಸಂಸ್ಥೆಯು ರಾಗಿಂಗ್ ವಿರೋಧಿ ಕ್ರಮಗಳನ್ನು ಅನುಸರಿಸಿದೆ ಎಂದು ಆಯೋಗವು ಒಂದು ನಿರ್ದಿಷ್ಟ ನಿಬಂಧನೆಯನ್ನು ಸೇರಿಸಿರುತ್ತದೆ.
- ಒಂದು ಸಂಸ್ಥೆಯಲ್ಲಿನ ಯಾವುದೇ ರೀತಿಯ ರಾಗಿಂಗ್ ನ ಘಟನೆಯು, ಎನ್ ಎ ಎ ಸಿ ಅಥವಾ ಇತರ ಯಾವುದೇ ಅಧಿಕೃತ ಸಂಸ್ಥೆಗಳು ಆ ಸಂಸ್ಥೆಗೆ ನೀಡುವ ಮಾನ್ಯತೆಯ ಮೇಲೆ ಪ್ರಭಾವ ಬೀರುತ್ತದೆ.
- ಖಾಯಿದೆಯ ಕಲಂ 12B ಅಡಿಯಲ್ಲಿ ಧನ ಸಹಾಯ ಪಡೆಯಲು ಅರ್ಹವಾದ ಸಂಸ್ಥೆಗಳು, ಯಾವುದೇ ರಾಗಿಂಗ್ ಘಟನೆಯನ್ನು ವರದಿ ಮಾಡದಿದ್ದರೆ, ಆರ್ಥಿಕ ಸಹಾಯದ ಸಮಾಯ್ದಲ್ಲಿ ಅಧಿಕ ಆದ್ಯತೆಯನ್ನು ಪಡೆಯುತ್ತವೆ.

5. **ರಾಗಿಂಗ್ ನಡೆದ ಸಂದರ್ಭದಲ್ಲಿ ಆಡಳಿತಾತ್ಮಕ ಕ್ರಮ:** ಕೆಳಗೆ ನೀಡಲಾಗಿರುವ ಕಾರ್ಯವಿಧಾನ ಮತ್ತು ಪ್ರಕ್ರಿಯೆಯನ್ನು ಅನುಸರಿದ ನಂತರ ರಾಗಿಂಗ್ ಮಾಡಿದ ತಪ್ಪಿಗೆ ಸಂಸ್ಥೆಯು ಒಬ್ಬ ವಿದ್ಯಾರ್ಥಿಯನ್ನು ಶಿಕ್ಷಿಸುವುದು:

- ರಾಗಿಂಗ್ ವಿರೋಧಿ ದಳದ ಶಿಫಾರಸ್ಸುಗಳಲ್ಲಿ ನಿರೂಪಿಸಿದ ರಾಗಿಂಗ್ ನ ವಿಧ ಮತ್ತು ಆಳ ಮತ್ತು ಪ್ರತಿಯೊಂದು ರಾಗಿಂಗ್ ಘಟನೆಯ ನಿಜಾಂಶಗಳನ್ನು ಆಧರಿಸಿ, ಸಂಸ್ಥೆಯ ರಾಗಿಂಗ್ ವಿರೋಧಿ ಸಮಿತಿಯು, ಶಿಕ್ಷಿಸಬೇಕೆ ಅಥವಾ ಬೇಡವೇ ಎಂಬುದರ ಕುರಿತು ಸೂಕ್ತ ನಿರ್ಣಯ ಕೈಗೊಳ್ಳುವುದು.
- ರಾಗಿಂಗ್ ವಿರೋಧಿ ಸಮಿತಿಯು, ರಾಗಿಂಗ್ ವಿರೋಧಿ ದಳವು ನಿರೂಪಿಸಿದ ತಪ್ಪಿನ ವಿಧ ಮತ್ತು ಆಳವನ್ನು ಅವಲಂಬಿಸಿ, ತಪ್ಪಿತಸ್ಥರಿಗೆ, ಕೆಳಗಿನ ಒಂದು ಅಥವಾ ಅಧಿಕ ಶಿಕ್ಷೆಗಳನ್ನು ನೀಡಬಹುದು:
    a) ತರಗತಿಗಳನ್ನು ಹಾಜರಾಗುವುದು ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಅಮಾನತ್ತುಗೊಳಿಸುವುದು
    b) ವಿದ್ಯಾರ್ಥಿವೇತನ / ಫೆಲೋಷಿಪ್ ಮತ್ತು ಇತರ ಸೌಲಭ್ಯಗಳನ್ನು ತಡೆಹಿಡಿಯುವುದು / ಹಿಂದೆಗೆದುಕೊಳ್ಳುವುದು
    c) ಯಾವುದೇ ಪರೀಕ್ಷೆ ಅಥವಾ ಇತರ ಯಾವುದೇ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳದಂತೆ ಡಿಬಾರ್ ಮಾಡುವುದು.
    d) ಫಲಿತಾಂಶಗಳನ್ನು ತಡೆಹಿಡಿಯುವುದು.
    e) ಯಾವುದೇ ಪ್ರಾದೇಶಿಕ, ರಾಷ್ಟ್ರೀಯ ಅಥವಾ ಅಂತರಾಷ್ಟ್ರೀಯ ಭೇಟಿ, ಪಂದ್ಯಾವಳಿ, ಯುವಜನೋತ್ಸವ ಮುಂತಾದವುಗಳಲ್ಲಿ ಸಂಸ್ಥೆಯನ್ನು ಪ್ರತಿನಿಧಿಸುವುದರಿಂದ ನಿಷೇಧಿಸುವುದು.
    f) ಹಾಸ್ಟೆಲ್ ನಿಂದ ಉಚ್ಚಾಟನೆ.
    g) ದಾಖಲಾತಿಯ ರದ್ದುಪಡಿಸುವಿಕೆ.
    h) ಒಂದರಿಂದ ನಾಲ್ಕು ಸೆಮಿಸ್ಟರ್ ವರೆಗೆ ಸಂಸ್ಥೆಯಿಂದ ಹೊರಹಾಕುವುದು.

i) ಸಂಸ್ಥೆಯಿಂದ ಉಚ್ಚಾಟಿಸುವುದು ಮತ್ತು ಒಂದು ನಿರ್ದಿಷ್ಟ ಅವಧಿಯವರೆಗೆ ಇತರ ಯಾವುದೇ ಸಂಸ್ಥೆಗೆ ದಾಖಲಾಗದಂತೆ ಡಿಬಾರ್ ಮಾಡುವುದು.

- ರಾಗಿಂಗ್ ನಂತಹ ಹೀನ ಕೃತ್ಯ ಎಸಗಿದ ವ್ಯಕ್ತಿಗಳನ್ನು ಗುರುತಿಸಲಾಗದಿದ್ದಾಗ, ಸಂಸ್ಥೆಯು ಸಾಮೂಹಿಕವಾಗಿ ಶಿಕ್ಷಿಸಬೇಕು.
- ರಾಗಿಂಗ್ ವಿರೋಧಿ ಸಮಿತಿಯು ನೀಡಿದ ಶಿಕ್ಷೆಯ ಆದೇಶದ ವಿರುದ್ಧ ಇವರುಗಳು ಅಪೀಲ್ ಸಲ್ಲಿಸಬಹುದು, (i) ಒಂದು ವಿಶ್ವವಿದ್ಯಾನಿಲಯಕ್ಕೆ ಸೇರಿದ ಅಥವಾ ಅದರ ಭಾಗವಾದ ಒಂದು ಸಂಸ್ಥೆಯ ಆದೇಶದ ಸಂದರ್ಭದಲ್ಲಿ, ಆ ವಿಶ್ವವಿದ್ಯಾನಿಲಯದ ಉಪಕುಲಪತಿಗಳಿಗೆ; (ii) ವಿಶ್ವವಿದ್ಯಾನಿಲಯದ ಸಂದರ್ಭದಲ್ಲಿ, ಅದರ ಕುಲಪತಿಗಳಿಗೆ; (iii) ಸಂವಿಧಾನದ ಒಂದು ವಿಧಿಯ ಪ್ರಕಾರ ಸ್ಥಾಪಿಸಲಾದ ರಾಷ್ಟ್ರೀಯ ಪ್ರಾಮುಖ್ಯತೆಯ ಒಂದು ಸಂಸ್ಥೆಯ ಸಂದರ್ಭದಲ್ಲಿ, ಆ ಸಂಸ್ಥೆಯ ಅಧ್ಯಕ್ಷ ಅಥವಾ ಕುಲಪತಿಗಳು.
- ನೇಮಕಾತಿಯ ಅಧಿಕಾರಿಯ ಅಭಿಪ್ರಾಯದಲ್ಲಿ, ಇದು ರಾಗಿಂಗ್ ಅನ್ನು ವರದಿ ಮಾಡದಿರುವುದು ಅಥವಾ ರಾಗಿಂಗ್ ಅನ್ನು ತಡೆಯಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳದಿರುವುದು ಅಥವಾ ರಾಗಿಂಗ್ ದೂರುಗಳನ್ನು ನಿರ್ಲಕ್ಷಿಸುವುದು ಅಥವಾ ಈ ನಿಬಂಧನೆಗಳಡಿಯಲ್ಲಿ ತೆಗೆದುಕೊಳ್ಳಬೇಕಾದ ಸಕಾಲಿಕ ಕ್ರಮಗಳನ್ನು ತೆಗೆದುಕೊಳ್ಳದಿರುವುದು ಮುಂತಾದವು ಒಂದು ದೋಷವೆಂದು ಪರಿಗಣಿಸಿ, ಇದಕ್ಕೆ ಸಂಸ್ಥೆಯ ಸಿಬ್ಬಂದಿಯ ಯಾವುದೇ ಸದಸ್ಯರನ್ನು ಕಾರಣವಾಗಿಸಬಹುದು ಮತ್ತು ಇಂತಹ ಸಿಬ್ಬಂದಿಯ ವಿರುದ್ಧ ಈ ಅಧಿಕಾರಿಯು, ಸಂಸ್ಥೆಯ ನಿರ್ದಿಷ್ಟ ಕಾರ್ಯವಿಧಾನಗಳ ಪ್ರಕಾರ ವಿಭಾಗೀಯ ಶಿಸ್ತಿನ ಕ್ರಮವನ್ನು ಪ್ರಾರಂಭಿಸಬಹುದು. ಒಂದು ವೇಳೆ ಅಚಾತುರ್ಯವನ್ನು ಸಂಸ್ಥೆಯ ಮುಖ್ಯಸ್ಥನಿಗೆ ವಹಿಸುವುದಾದರೆ, ಮುಖ್ಯಸ್ಥರನ್ನು ನೇಮಿಸುವ ಅಧಿಕಾರವಿರುವವರು ವಿಭಾಗೀಯ ಶಿಸ್ತು ಕ್ರಮವನ್ನು ಕೈಗೊಳ್ಳಬೇಕು; ಮತ್ತು ಈ ಕ್ರಮವು, ರಾಗಿಂಗ್ ತಡೆಯಲು ಸಕಾಲಿಕ ಕ್ರಮವನ್ನು ತೆಗೆದುಕೊಳ್ಳದಿರುವುದು ಅಥವಾ ರಾಗಿಂಗ್ ಮಾಡಿದ ವಿದ್ಯಾರ್ಥಿಯನ್ನು ಶಿಕ್ಷಿಸಲು ವಿಫಲವಾಗಿದ್ದಕ್ಕಾಗಿ, ಕಾನೂನಿನ ಪ್ರಕಾರ ತೆಗೆದುಕೊಳ್ಳಲಾಗುವ ಕ್ರಮಕ್ಕೆ ಪ್ರತ್ಯೇಕವಾಗಿರುತ್ತದೆ.